ಇ) ನೌಕರರು ನಿವೃತ್ತಿ ಹೊಂದಿದರೂ ಕೂಡ ಇತ್ಯರ್ಥವಾಗದೇ ಇರುವ ಪ್ರಕರಣಗಳು ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಹೌದು

ಆ) ಲಭ್ಯವಿರುವ ಮಾಹಿತಿಯ ಪ್ರಕಾರ 2197 ಪ್ರಕರಣಗಳು ಇತ್ಯರ್ಥವಾಗಬೇಕಿದೆ.

ಇ) ಲಭ್ಯವಿರುವ ಮಾಹಿತಿಯ ಪ್ರಕಾರ 305 ಪ್ರಕರಣಗಳು ಬಾಕಿ ಇವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಲಾನಯನ ಇಲಾಖೆಗೆ ಬಿಡುಗಡೆಯಾದ ಹಣ

3451 (3528) : ಶ್ರೀ ಬಿಆರ್. ನೀಲಕಂಠಪ್ಪ (ತರೀಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಜಲಾನಯನ ಇಲಾಖೆಯಲ್ಲಿ 2000–01, 2001–02 ಮತ್ತು 2002–03 ಈ ಮೂರು ವರ್ಷ ಗಳಲ್ಲಿ ಎಷ್ಟು ಹಣ ವಿನಿಯೋಗಿಸಲಾಗಿದೆ. ಮೂರು ವರ್ಷಗಳ ಕಾಮಗಾರಿಗಳ ವಿವರ ಮತ್ತು ಮೊತ್ತ ತಿಳಿಸುವುದು.

ಆ) ತರೀಕೆರೆ ಜಲಾನಯನ ಇಲಾಖೆ ವ್ಯಾಪ್ತಿಯಲ್ಲಿ ಭದ್ರಾ ಕಾಡಾ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಜಲಾನಯನ ಇಲಾಖೆಗೆ ಬಿಡುಗಡೆಯಾದ ಹಣವೆಷ್ಟು? ಕಾಮಗಾರಿಗಳ ವಿವರ ನೀಡುವುದು?

ಶ್ರೀ ವಿ. ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿ ಜಲಾನಯನ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಒಟ್ಟು 1963.05 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದ್ದು, ಇದರ ಕಾಮಗಾರಿವಾರು ವೆಚ್ಚದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ತರೀಕೆರೆ ಜಲಾನಯನ ಇಲಾಖೆ ವ್ಯಾಪ್ತಿಯಲ್ಲಿ ಭದ್ರಾ ಕಾಡಾ ವತಿಯಿಂದ 2001–02 ಹಾಗೂ 2002–03ನೇ ಸಾಲಿನಲ್ಲಿ ಒಟ್ಟು 24.86 ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಇದರಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ವರ್ಷ	ಬಿಡುಗಡೆಯಾದ ಅನುದಾನ	ಕೈಗೊಳ್ಳಲಾದ ಕಾಮಾಗಾರಿ	ಮಾಡಲಾದ ವೆಚ್ಚ (ಲಕ್ಷ ರೂ. ಗಳಲ್ಲಿ)
2001–02	7.65	ಬಸಿಗಾಲುವ್ (5 ಬ್ಲಾಕ್)	7.65
2002–03	17.21	ಬಸಿಗಾಲುವೆ (11 ಬ್ಲಾಕ್)	15.49
ಒಟ್ಟು	24.86	16	23.14

ಅನುಬಂಧ-1

ಚಿಕ್ಕಮಗಳೂರು ಜಿಲ್ಲೆಯಲ್ಲಿ ವರ್ಷವಾರು ಅನುಷ್ಠಾನಗೊಳಿಸಲಾದ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	2000-01 ಕಾಮಗಾರಿಕೆಗಳ ಸಂಖ್ಯೆ	2001-02 ಕಾಮಗಾರಿಕೆಗಳ ಸಂಖ್ಯೆ	2002-03 ಕಾಮಗಾರಿಕೆಗಳ ಸಂಖ್ಯೆ	ವೆಚ್ಚವಾದ ಅನುದಾನ (ಲಕ್ಷ ರೂ. ಗಳಲ್ಲಿ)
1	2	3	4	5	6
1.	ತಡೆ ಅಣೆ	258	307	161	
2.	ಕೃಷಿ ಹೊಂಡ	873	741	855	
3.	ಕಿಂಡಿ ತಡೆ ಅಣೆ	161	85	123	
4.	ರೆಬಲ್ ತಡೆ	766	430	305	
5.	ನಾಲಾ ಬದು	24	10	16	
6.	ನಾಲಾ ರಿವಿಟ್ ಮೆಂಟ್	64	150	158	
7.	ಸಮುದಾಯ ಭವನ	45	42	33	1963.05
8.	ತಿರುವುಗಾಲುವೆ	16	02	08	
9.	ಎಲ್.ಆರ್.ಆರ್.ಎಸ್.	206	–	45	
10.	ಟ್ರಂಚಿಂಗ್	588	420	119	
11.	ಕೆರೆ ಹೂಳೆತ್ತುವುದು	–	18	83	
12.	ಬಸಿಗಾಲುವೆ	–	5	11	
	ಒಟ್ಟು	**3001**	**2210**	**1917**	

ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ನೀಡುವ ಅನುದಾನ

3455 (4009) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಸಣ್ಣ ನೀರಾವರಿ ಇಲಾಖೆಗೆ ಕಳೆದ 3 ವರ್ಷಗಳಲ್ಲಿ ನೀಡಿದ ಅನುದಾನ ಎಷ್ಟು;

ಆ) ಇಲಾಖೆಯ ಅನುದಾನವನ್ನು ಬಳಸಿಕೊಂಡು ಕೈಗೊಂಡ ಕಾಮಗಾರಿಗಳಾವುವು; ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ವೆಚ್ಚವಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಕಾಮಗಾರಿಗಳಲ್ಲಿ ಸಾಧಿಸಲಾಗಿರುವ ಭೌತಿಕ ಗುರಿ ಏನು;

ಈ) ಕಾಮಗಾರಿಗಳನ್ನು ಕೈಗೊಳ್ಳದೇ ಇದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿಲ್ಲ; ಇದಕ್ಕೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಬಿಜಾಪುರ ಜಿಲ್ಲೆಯ ಕಾಮಗಾರಿಗಳಿಗೆ ಈ ಕೆಳಗಿನಂತೆ ಅನುದಾನ ಒದಗಿಸಲಾಗಿದೆ.